**Order Sheet**
**In the Court Of: III Addl. CIVIL JUDGE AND JMFC BELAGAVI**
**AT BELGAUM**
**F.R.No:O.S./949/2013**
**Case Reg.No: O.S./947/2013**

| **Plaintiff** | V E R S U S | **Defendent** |
| --- | --- | --- |

-------------------------------------------------------------------------------------------------------

| | |
| --- | --- |
| **1)Smt. Pushpa Wo. Veerappa Badiger &2 others** | **1)Shri. Bhimarao So. Irappa Sutar &7 others** |
| **2)Smt. Bharati Wo. Mohan Badiger** | **2)Smt. Anasuya Wo. Bhimarao Sutar**<br>**3)Shri. Suresh So. Bhimarao Sutar**<br>**4)Shri. Ramesh So. Bhimarao Sutar**<br>**5)Shri. Ramchandra So. Irappa Sutar**<br>**6)Shri. Kallappa So. Ningappa Patil**<br>**7)Shri. Rajaram So. Ningappa Patil** |

ಗೌರವಾನ್ವಿತ 3ನೇ ಅಧೀಕ ಸಿವಿಲ್ ಮತ್ತು ಜೆಎಮಎಫಸಿ ನ್ಯಾಯಾಲಯ ಬೆಳಗಾವಿ

ಅಸಲು ದಾವಾ ನಂಃ 947-2013
ಪಿ. ಡಬ್ಲ್ಯೂ-1

ದಿಃ 07-02-2017 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಭೋದಿಸಲಾಯಿತು.
ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ

ಪ್ರತಿವಾದಿ 5, 8 ಮತ್ತು 9 ನನ್ನ ಕಾಕಾಂದಿರ ಪಾಲಿಗೆ ಎಷ್ಟು ಆಸ್ತಿ ಬಂದಿದೆ ಎಂದು ನಾನು ಹೇಳಬಹುದು. ನೋಟರಿ ವಾಟನಿ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಮತ್ತು ಸಾಕ್ಷಿ ಪರ ವಕೀಲರು ಸಮ್ಮತಿ ಮೇರೆಗೆ ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು (ನ್ಯಾಯಾಲಯದ ಟಿಪ್ಪಣಿಃ ಮೂಲ ವಾಟನಿ ಪತ್ರ 1ನೇ ಪ್ರತಿವಾದಿ ಅಂದರೆ ಸಾಕ್ಷಿಯ ತಂದೆಯ ಹತ್ತಿರ ಇರುವುದರಿಂದ ನೋಟರಿ ಪ್ರತಿಯನ್ನು ಗುರುತಿಸಲಾಗಿರುತ್ತದೆ ಮತ್ತು ಇದರ ತರ್ಜುಮೆ ಪ್ರತಿಯನ್ನು ನಿಡಿ-1ಎ ಎಂದು ಗುರುತಿಸಲಾಯಿತು.) 8 ಮತ್ತು 9ನೇ ಪ್ರತಿವಾದಿಗೆ ಪಾಟನಿ ಪತ್ರದ ಮೇರೆಗೆ ತಮಗೆ ಬಂದ ಪಾಲನ್ನು ಕೊಡಲು ನನಗೆ ಯಾವುದೇ ಅಡಚಣೆ ಇರುವುದಿಲ್ಲ. ನಿಪಿ-10 ರಲ್ಲಿ 8 ಮತ್ತು 9ನೇ ಪ್ರತಿವಾದಿಗೆ ಪಾಟನಿ ಪತ್ರದ ಮೇರೆಗೆ ತಮಗೆ ಬಂದ ಪಾಲನ್ನು ಕೊಡಲಾಗಿರುತ್ತದೆ ಎಂದು ಉಲ್ಲೇಖ ಇರುವುದಿಲ್ಲ ಎಂದು ಪ್ರಶ್ನಿಸಿದಾಗ ಸಾಕ್ಷಿ ಸದರಿರವರು ನನ್ನ ತಂದೆಗೆ ತಮ್ಮ ಪಾಲಿಗೆ ಬಂದ ಆಸ್ತಿಯನ್ನು ಬಿಟ್ಟು ಕೊಟ್ಟಿರುತ್ತಾರೆ ಆದ ಕಾರಣ ಅವರ ಉಲ್ಲೇಖ ಇರುವುದಿಲ್ಲ ಎಂದು ನುಡಿಯುತ್ತಾರೆ. 8 ಮತ್ತು 9ನೇ ಪ್ರತಿವಾದಿಯರು ತಮ್ಮ ಪಾಲಿಗೆ ಬಂದ ಆಸ್ತಿಯನ್ನು ಬಿಟ್ಟು ಕೊಟ್ಟಿರುತ್ತಾರೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 8 ಮತ್ತು 9ನೇ ಪ್ರತಿವಾ

ದಿಯರು ಅನಕ್ಷರಸ್ಥ ಇದ್ದ ಕಾರಣ ನನ್ನ ತಂದೆ ಸಂಬಂಧಪಟ್ಟ ಕಂದಾಯ ಇಲಾಖೆಯವರ ಜೊತೆ ಸೇರಿ 8 ಮತ್ತು 9ನೇ ಪ್ರತಿವಾದಿಯರ ಹೆಸರು ಕಡಿಮೆ ಮಾಡಿ ತಮ್ಮ ಹೆಸರು ಮತ್ತು ತಮ್ಮ ಸಹೋದರರ ಹೆಸರು ಹಚ್ಚಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಪಾಲು ಕೇಳಿದ ಹಾಕಿದ ಈ ದಾವೆಯಲ್ಲಿ 8 ಮತ್ತು 9ನೇ ಪ್ರತಿವಾದಿಯರ ಪಾಲು ಇರುತ್ತದೆ ಎಂದರೆ ಸರಿಯಲ್ಲ. ದಿಃ 18-7-1992 ರಲ್ಲಿ ಆದ ಪಾಲು ವಾಟನಿ ಡೈರಿ ವಿಷಯ ಗೊತ್ತಾದ ನಂತರ 8 ಮತ್ತು 9ನೇ ಪ್ರತಿವಾದಿಯರು ಪ್ರಶ್ನಿಸಿರುತ್ತಾರೆ ಎಂದರೆ ಸರಿಯಲ್ಲ. ಕಂದಾಯ ಇಲಾಖೆಯವರು ತಾಂತ್ರಿಕ ತಪ್ಪಿನಿಂದ ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. 8 ಮತ್ತು 9ನೇ ಪ್ರತಿವಾದಿಯರು ಪಾಲು ವಾಟನಿ ಡೈರಿ ಆದಾಗಿನಿಂದ ತಮ್ಮ ಪಾಲಿನ ಆಸ್ತಿಯನ್ನು ಕೇಳುತ್ತಾ ಇದ್ದಾರೆ ಎಂದರೆ ಸರಿಯಲ್ಲ. ನನಗೆ ಮತ್ತು ಪ್ರತಿವಾದಿ 3 ಮತ್ತು 4 ನನ್ನ ಸಹೋದರರ ಸಂಬಂಧ ಚನ್ನಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಯ ಜೊತೆ ನನ್ನ ಸಂಬಂಧ ಚನ್ನಾಗಿರುವುದಿಲ್ಲ. ನಾವು ವಾದಿಯರು ಮತ್ತು 1 ರಿಂದ 4 ಪ್ರತಿವಾದಿಯರು 8 ಮತ್ತು 9ರ ಪ್ರತಿವಾದಿಯರ ಪಾಲಿಗೆ ಬಂದ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. 8 ಮತ್ತು 9ರ ಪ್ರತಿವಾದಿಯರು ನನ್ನ ತಂದೆಯಿಂದ ಹಣ ಪಡೆದು ತಮ್ಮ ಪಾಲಿನ ಆಸ್ತಿಯನ್ನು ಯಾವಾಗ ಎಲ್ಲಿ ಮತ್ತು ಎಷ್ಟು ದುಡ್ಡು ಪಡೆದು ಬಿಟ್ಟು ಕೊಟ್ಟಿರುತ್ತಾರೆ ನನಗೆ ಹೇಳಲು ಬರುವುದಿಲ್ಲ. 8 ಮತ್ತು 9ರ ಪ್ರತಿವಾದಿಯರು ಹಣ ಪಡೆದು ತಮ್ಮ ಆಸ್ತಿಯನ್ನು ಬಿಟ್ಟು ಕೊಟ್ಟಿರುವುದಿಲ್ಲ ಆದ ಕಾರಣ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-9 ಪ್ರಮಾಣ ಪತ್ರ ನೊಂದಣಿ ಆಗಿರುವುದಿಲ್ಲ ಎಂದರೆ ಸರಿ. ನಿಪಿ-9ರ 2ನೇ ಪುಟದಲ್ಲಿ ಮಾಡಿರುವ ಸಹಿಗಳು ಸದರಿವರಿಗೆ ಸಂಬಂಧಪಟ್ಟ ಸಹಿಗಳು ಅಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಪ್ರತಿವಾದಿ 5, 8 ಮತ್ತು 9ರವರ ಸಹಿಗಳನ್ನು ಸೃಷ್ಟಿಸಿ ಸದರಿ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-9 ರೀತಿಯ ದಾಖಲಾತಿಗಳನ್ನು ಸೃಷ್ಟಿಸಿ ಒಟ್ಟು ಕುಟುಂಬದ ಆಸ್ತಿಗಳನ್ನು ಲಪಟಾಯಿಸಿರುತ್ತಾರೆ ಎಂದರೆ ಸರಿಯಲ್ಲ. ನಾವೇಲ್ಲಾ ಸದಸ್ಯರು ಒಟ್ಟುಗೂಡಿ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಪ್ರತಿವಾದಿ 5,8 ಮತ್ತು 9 ಕಾನೂನು ಬದ್ಧವಾಗಿ ಪಾಲಿಗೆ ಹಕ್ಕು ಉಳ್ಳವರಾಗಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಇರುವುದಿಲ್ಲ.

(ಸಾಕ್ಷಿಯ ಹೇಳಿ ಕೆಯನ್ನು ತೆ.ನ್ಯಾ.ದಲ್ಲಿ ನನ್ನ ಉಕ್ತಲೇಖ ನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ.

-ಸಹಿ-

3ನೇ ಅಧಿಕ ಸಿವಿಲ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಧೀಶರು,

ಬೆಳಗಾವಿ.